ಸಾಮಾಜಿಕ, ರಾಜಕೀಯ, ಚಾರಿತ್ರಿಕ ನೆಲೆಗಳೇ ಮುನ್ನೆಲೆಗೆ ಬಂದು ಆಶಯಗಳ ಅಧ್ಯಯನವು ಮುಖ್ಯವಾಗಿದೆ. ಇದು 'ವಿಮರ್ಶೆಯು ಏನು ಮಾಡಬೇಕು?' ಎನ್ನುವ ಪ್ರಶ್ನೆಗೆ ಕೊಟ್ಟುಕೊಂಡ ವಿಭಿನ್ನವಾದ ಉತ್ತರಗಳ ಪರಿಣಾಮ. ಇಂತಹ ಆಲೋಚನಾಕ್ರಮದಲ್ಲಿ ತಪ್ಪಿಲ್ಲ. ಆದರೆ, ಅದು ಕತ್ತಿಯಂಚಿನ ನಡಿಗೆ. ಅದು 'ಇಡಿ' ಮತ್ತು 'ಬಿಡಿ'ಗಳನ್ನು ಒಟ್ಟಾಗಿ ಒಟ್ಟುಗೂಡಿಸಿ ನೋಡುವ ಕೆಲಸ. ಆದ್ದರಿಂದ ಇಂದಿನ ವಿಮರ್ಶೆಯು ಸಾರಾಸಗಟಾಗಿ ಸಾಹಿತ್ಯಕೃತಿಗಳನ್ನು ಅವಲಂಬಿಸಿರುವುದಿಲ್ಲ. ಅದು ಜ್ಞಾನಸೃಷ್ಟಿಯ ಸ್ವತಂತ್ರ ಕೆಲಸವಾಗಿದೆ. ಈ ನೆಲೆಯಲ್ಲಿ ಸಾಹಿತ್ಯವಿಮರ್ಶೆಯು ಲೋಕವಿಮರ್ಶೆಯೂ ಹೌದು. ಹೀಗೆ ಮಾಡುವುದರಿಂದ ಲಾಭನಷ್ಟಗಳೆರಡೂ ಆಗಿವೆ. ಅಲಕ್ಷ್ಯ ಮತ್ತು ಅನಾದರಗಳಿಗೆ ಒಳಗಾಗಿದ್ದ ಬರವಣಿಗೆಗಳ ಕಡೆಗೆ ನಮ್ಮ ಗಮನ ಹರಿದಿದೆ. ಏಕಶಿಲಾಕಾರವೆಂದು ಮಂಡಿಸಲಾಗಿದ್ದ ಸಂಸ್ಕೃತಿಯೊಳಗಿನ ಬಹುತ್ವಕ್ಕೆ ಮನ್ನಣೆ ಸಿಕ್ಕಿದೆ. ಯಾರೋ 'ಪ್ರಿಸ್ಕ್ರೈಬ್' ಮಾಡಿದ್ದ ಶ್ರೇಷ್ಠತೆಯ ಮಾನದಂಡಗಳನ್ನು ಬದಿಗಿರಿಸಿ 'ಅನ್ಯ'ವನ್ನು ಗುರುತಿಸುವ ಕೆಲಸ ನಡೆದಿದೆ. ಆದರೆ ಅದು ಮಾನದಂಡಗಳೇ ಇಲ್ಲದೆ ಹಾಡಿಹೊಗಳಲು ನೆರವಾಗುವ ಹುನ್ನಾರ ಆಗಬಾರದು. ಇಂದು ಹೀಗೆಯೂ ಆಗುತ್ತಿದೆ. ಈ ಕೆಲಸದಲ್ಲಿ ಸರ್ಕಾರ, ಸಂಘ–ಸಂಸ್ಥೆಗಳ ಪಾತ್ರವೂ ಧಾರಾಳವಾಗಿದೆ. ಸಾಹಿತ್ಯಕೃತಿಗಳ ಕಟ್ಟೋಣದ ಕಡೆಗೆ ತಿರುಗಿಯೂ ನೋಡದೆ, ಸಂಸ್ಕೃತಿಯ ಬಗ್ಗೆ ಬರಹ–ಭಾಷಣ ಮಾಡುವವರಿರುವಂತೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಅ–ಸಾಹಿತ್ಯದ ಮೆರವಣಿಗೆ ಮಾಡುವವರೂ ಹೇರಳವಾಗಿದ್ದಾರೆ. ವಯಸ್ಸಾದ ಸಾಹಿತಿಗಳೆಲ್ಲ ಹಿರಿಯ ಸಾಹಿತಿಗಳಲ್ಲ. ಅವರ ಮಾತುಗಳು ಮಂತ್ರಪುಷ್ಪಗಳಲ್ಲ. ಈ ಕಾರಣದಿಂದ ಹೊಸದಾಗಿ ಬರೆಯುತ್ತಿರುವರಿಗೆ ದಿಕ್ಕು ತೋಚದ, ದಿಕ್ಕು ತಪ್ಪಿಸುವ ಸನ್ನಿವೇಶ ಇರುವುದು ನಿಜ. ಆದರೆ, ಪ್ರತಿಭಾವಂತರು ಹೊಸ ದಾರಿಗಳನ್ನು ಕಂಡುಕೊಳ್ಳುತ್ತಿದ್ದಾರೆ. ಇದು ಕನ್ನಡ ಸಾಹಿತ್ಯಕ್ಕೆ ಮಾತ್ರ ಸೀಮಿತವಾದ ಸನ್ನಿವೇಶವೆಂದು ನನಗೆ ತೋರುವುದಿಲ್ಲ.

ಪುಸ್ತಕಗಳ ಸಂಖ್ಯೆ ಜಾಸ್ತಿಯಾಗಿ ಅವುಗಳ ಬಗ್ಗೆ ಬರೆಯುವುದು ಕಡಿಮೆಯಾಗಿದೆ. ಕಳೆದ ಕಾಲ, ಇರುವ ಕಾಲ, ಬರಲಿರುವ ಕಾಲ ಎಲ್ಲದರ ಬಗ್ಗೆ ಬರೆಯುವ ಹೊಣೆಗಾರಿಕೆ ಇರುವ ವಿಮರ್ಶಕರು ಹೊಸ ಪೀಳಿಗೆಯ ಪ್ರತಿಯೊಬ್ಬ ಲೇಖಕನ ಬಗ್ಗೆಯೂ ಬರೆಯುವುದು ಸಾಧ್ಯವಿಲ್ಲ, ಅಗತ್ಯವಿಲ್ಲ. ಹಾಗೆಂದು ಭೂತದಲ್ಲಿ ಕಣ್ಣಿಟ್ಟು ವರ್ತಮಾನದ ಕಡೆಗೆ ಕಣ್ಣು ತಿರುಗಿಸದ ವಿಮರ್ಶಕರು ಭೂತದಲ್ಲಿಯೇ ಹೂತುಹೋಗುತ್ತಾರೆ. ಅರವತ್ತರ ಆಚೀಚೆ ಇರುವ ಹಲವು ಲೇಖಕ, ಲೇಖಕಿಯರ ಬಗ್ಗೆಯೇ ಮಹತ್ವದ ವಿಮರ್ಶೆಯು ಇನ್ನೂ ಬರಬೇಕಾಗಿದೆ. ಸಾಹಿತ್ಯಕ ಪತ್ರಿಕೆಗಳ ಅನುಪಸ್ಥಿತಿಯಲ್ಲಿ, 'ಮೇನ್ ಸ್ಟ್ರೀಮ್' ಪತ್ರಿಕೆಗಳ 'ಜಾಗ ಜಿಪುಣತನ'ದಲ್ಲಿ ಯಾರಾದರೂ ಪುಸ್ತಕ ವಿಮರ್ಶೆಯನ್ನು ಬರೆದರೂ ಪ್ರಕಟಿಸುವುದೆಲ್ಲಿ? ಅಂತರ್ಜಾಲವು ಕೊಡುವ 'ಅವಕಾಶ'ವು ಸರಸ ಅಥವಾ ವಿರಸಗಳ ಅತಿರೇಕದಲ್ಲಿ ರಮಿಸುತ್ತದೆ. ಆದರೂ ಅಲ್ಲಿ ಗಂಭೀರವಾದುದನ್ನು ಬರೆಯುವ, ಪ್ರಕಟಿಸುವ ಅವಕಾಶವಿದೆ. ಈ ನೆಲೆಯಲ್ಲಿ 'ಸಾಮಾಜಿಕ ಜಾಲತಾಣ'ಗಳಿಗಿಂತ ವೈಯಕ್ತಿಕವಾದ ಬ್ಲಾಗುಗಳು ಹೆಚ್ಚು ಉಪಯುಕ್ತ. ಕಿರಿಯರೇ ಮೊದಲು ಮಾಡಿ ನಡೆಸುತ್ತಿರುವ ಕೆಲವು 'ವೆಬ್ ಪತ್ರಿಕೆ'ಗಳು ಒಳ್ಳೆಯ ಕೆಲಸವನ್ನೇ ಮಾಡುತ್ತಿವೆ.

ನನಗೆ ತೋರುವ ಹಾಗೆ, ಕಿರಿಯ ಪೀಳಿಗೆಯ ಲೇಖಕರನ್ನು ಗುರುತಿಸುವ/ಮೆಚ್ಚುವ/ಬೆಳೆಸುವ ಕೆಲಸವು 'ಪಬ್ಲಿಕ್' ಆಗಿಯೇ ನಡೆಯುವುದು ಅನಿವಾರ್ಯವಲ್ಲ. ಒಳ್ಳೆಯ ವಿಮರ್ಶಕರು ಹಾಗೂ ಅಧ್ಯಾಪಕರು ವೈಯಕ್ತಿಕ ಸಂಪರ್ಕಗಳ ನೆಲೆಯಿಂದಲೂ, ತೋಂಡೀ ವಿಧಾನದಿಂದಲೂ, ಮಾದರಿ ಕೃತಿಗಳನ್ನು ಪರಿಚಯಿಸುವುದರಿಂದಲೂ ಲೇಖಕರನ್ನು ಬೆಳೆಸಬಲ್ಲರು. ಎ.ಆರ್.ಕೃ., ರಾಜರತ್ನಂ, ತೀ.ನಂ.ಶ್ರೀ., ಕುರ್ತಕೋಟಿ, ಶಿವರುದ್ರಪ್ಪ, ಲಂಕೇಶ್, ಅನಂತಮೂರ್ತಿ, ಜಿ.ಎಚ್. ನಾಯಕ, ಕಿ.ರಂ. ನಾಗರಾಜ ಮುಂತಾದವರು ಈ ಬಗೆಯ ಕೆಲಸ ಮಾಡಿದರು. ಈಗಲೂ ಅಂತಹ